# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಎಂ. ಇಬ್ರಾಹಿಂ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 184 |
| ಉತ್ತರಿಸುವ ದಿನಾಂಕ | 16.02.2022 |
| ಉತ್ತರಿಸುವ ಸಚಿವರು | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಅನು ಕ್ರಮ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ ಮುಖ್ಯಮಂತ್ರಿಗಳ ಬಹುಮಹಡಿಯ ಬೆಂಗಳೂರು ವಸತಿ ಯೋಜನೆಯನ್ನು ಎಷ್ಟು ಹಂತಗಳಲ್ಲಿ ಪೂರ್ಣಗೊಳಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ; ಯಾವ ಯಾವ ವಿಧಾನಸಭಾ ಕ್ಷೇತ್ರಗಳಲ್ಲಿ ಯೋಜನೆಯನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ; (ವಿವರ ನೀಡುವುದು)</td><td>ಮುಖ್ಯ ಮಂತ್ರಿಯವರ "ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಯನ್ನು ಎರಡು ಹಂತಗಳಲ್ಲಿ ಅಂದರೆ, ಮೊದಲನೇ ಹಂತದಲ್ಲಿ 46,499 (ಜಿ+3 ಯಿಂದ ಎಸ್+14 ರವರೆಗೆ) ಮನೆಗಳು ಹಾಗೂ ಎರಡನೇ ಹಂತದಲ್ಲಿ 53,501 (ಜಿ+3) ಮನೆಗಳನ್ನು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ವತಿಯಿಂದ ನಿರ್ಮಿಸಲು ವಸತಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.<br><br>ಮೊದಲನೇ ಹಂತದಲ್ಲಿ ಈ ಕೆಳಕಂಡ ವಿಧಾನಸಭಾ ಕ್ಷೇತ್ರಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 46,499 ಬಹುಮಹಡಿ ಮನೆಗಳನ್ನು ನಿರ್ಮಿಸಲಾಗುತ್ತಿದ್ದು, ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ :-<br><br><table><tr><th>ವಿಧಾನ ಸಭಾ ಕ್ಷೇತ್ರ</th><th>ಮನೆಗಳ ಸಂಖ್ಯೆ</th></tr><tr><td>ಕೆ. ಆರ್. ಪುರಂ</td><td>684</td></tr><tr><td>ಮಹದೇವಪುರ</td><td>4,706</td></tr><tr><td>ಆನೇಕಲ್</td><td>6,258</td></tr><tr><td>ಬೆಂಗಳೂರು ದಕ್ಷಿಣ</td><td>1,307</td></tr><tr><td>ಯಶವಂತಪುರ</td><td>17,350</td></tr><tr><td>ಬ್ಯಾಟರಾಯನಪುರ</td><td>4,007</td></tr><tr><td>ಯಲಹಂಕ</td><td>11,256</td></tr><tr><td>ದಾಸರಹಳ್ಳಿ</td><td>931</td></tr></table><br>ಈ ಪೈಕಿ ಸುಮಾರು 3,000 ಬಹುಮಹಡಿ ಮನೆಗಳ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಏಪ್ರಿಲ್-2022ರ ಅಂತ್ಯಕ್ಕೆ ಅರ್ಹ ಫಲಾನುಭವಿಗಳಿಗೆ ಹಸ್ತಾಂತರಿಸಲು ಸದರಿ ನಿಗಮದ ವತಿಯಿಂದ ಅಗತ್ಯ ಕ್ರಮ ವಹಿಸಲಾಗುತ್ತಿದೆ.</td></tr>
</table>

| | | |
|---|---|---|
| ಆ | ಸದರಿ ಯೋಜನೆಯಡಿ ವಸತಿ ಬಯಸಿ ಇದುವರೆಗೂ ಸಲ್ಲಿಕೆಯಾಗಿರುವ ಅರ್ಜಿಗಳೆಷ್ಟು; ಎಷ್ಟು ಫಲಾನುಭವಿಗಳಿಗೆ ವಸತಿಯನ್ನು ಹಂಚಿಕೆ ಮಾಡಲಾಗಿದೆ; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು) | ಸದರಿ ಯೋಜನೆಯಡಿ ಇಲ್ಲಿಯವರೆಗೆ 38,005 ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗಿವೆ. ಇಲ್ಲಿಯವರೆಗೆ 5,045 ಫಲಾನುಭವಿಗಳು ಪ್ರಾರಂಭಿಕ ಠೇವಣಿಯಾಗಿ ತಲಾ ರೂ. 1.00 ಲಕ್ಷದಂತೆ ಮೊತ್ತ ಪಾವತಿಸಿದ್ದು, ಈ ಪೈಕಿ 3,022 ಫಲಾನುಭವಿಗಳು ತಮ್ಮ ಇಚ್ಛೆಯ ಫ್ಲಾಟ್ / ಮನೆಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.<br><br>ಈ ಬಗ್ಗೆ ಫಲಾನುಭವಿಗಳು ಆನ್‌ಲೈನ್‌ನಲ್ಲಿ ಆಯ್ಕೆ ಮಾಡಿಕೊಂಡಿರುವ ಮನೆ / ಫ್ಲಾಟ್‌ಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಇ | ಇಲ್ಲಿಯವರೆಗೆ ಯೋಜನೆಗೆ ಜಾಗ ಮತ್ತು ಮನೆ ನಿರ್ಮಾಣ ಮಾಡಲು ಖರ್ಚು ಮಾಡಿದ ಹಣ ಎಷ್ಟು? (ಸಂಪೂರ್ಣ ಮಾಹಿತಿ ನೀಡುವುದು) | ಇಲ್ಲಿಯವರೆಗೆ ಸದರಿ ಯೋಜನೆಗೆ ಕಂದಾಯ ಇಲಾಖೆಯಿಂದ 1167 ಎಕರೆ 24 ಗುಂಟೆ ಜಮೀನನ್ನು ಉಚಿತವಾಗಿ (ಮುಫತ್ತಾಗಿ) ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತಕ್ಕೆ ಮಂಜೂರು ಮಾಡಲಾಗಿದೆ.<br><br>ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಯಾವುದೇ ಜಮೀನನ್ನು ಇದುವರೆಗೆ ಖರೀದಿ ಮಾಡಿರುವುದಿಲ್ಲ ಹಾಗೂ ಪ್ರಸ್ತುತ ಖರೀದಿ ಮಾಡಲು ಉದ್ದೇಶಿಸಿರುವುದಿಲ್ಲ. ಇದರಿಂದಾಗಿ ಸದರಿ ಜಮೀನು ಖರೀದಿಗಾಗಿ ಇಲ್ಲಿಯವರೆಗೆ ಯಾವುದೇ ಮೊತ್ತ (ಹಣ) ವನ್ನು ಖರ್ಚು ಮಾಡಿರುವುದಿಲ್ಲ.<br><br>ಆದರೆ, ಈ ಯೋಜನೆಯ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ರೂ. 900.06 ಕೋಟಿಗಳ ಮೊತ್ತವನ್ನು ಖರ್ಚು ಮಾಡಲಾಗಿದೆ. |

[ಸಂಖ್ಯೆ: ವಇ 23 ಹೆಚ್‌ಎಫ್‌ಎ 2022]

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು.

ಅನುಬಂಧ-1

| ಕ್ಷೇತ್ರದ ಹೆಸರು | ಒಟ್ಟು ಸ್ಥಳಗಳಲ್ಲಿ ನಿರ್ಮಾಣ | ಒಟ್ಟು ಬ್ಲಾಕ್ ಸಂಖ್ಯೆ | ಒಟ್ಟು ಫ್ಲಾಟ್‌ಗಳ ಸಂಖ್ಯೆ | ಒಟ್ಟು ಫ್ಲಾಟ್‌ಗಳ ಸಂಖ್ಯೆ ವಿಕಲಚೇತನರಿಗೆ | ಒಟ್ಟು ಫ್ಲಾಟ್‌ಗಳ ಸಂಖ್ಯೆ ಇತರರಿಗೆ | ಒಟ್ಟು ಬುಕ್ ಆಗಿರುವ ಫ್ಲಾಟ್‌ಗಳ ಸಂಖ್ಯೆ | ಒಟ್ಟು ಬುಕ್ ಆಗಿರುವ ಫ್ಲಾಟ್‌ಗಳ ಸಂಖ್ಯೆ ವಿಕಲಚೇತನರಿಗೆ | ಒಟ್ಟು ಬುಕ್ ಆಗಿರುವ ಫ್ಲಾಟ್‌ಗಳ ಸಂಖ್ಯೆ ಇತರರಿಗೆ | ಒಟ್ಟು ಲಭ್ಯವಿರುವ ಫ್ಲಾಟ್‌ಗಳ ಸಂಖ್ಯೆ | ಒಟ್ಟು ಲಭ್ಯವಿರುವ ಫ್ಲಾಟ್‌ಗಳ ಸಂಖ್ಯೆ ವಿಕಲಚೇತನರಿಗೆ | ಒಟ್ಟು ಲಭ್ಯವಿರುವ ಫ್ಲಾಟ್‌ಗಳ ಸಂಖ್ಯೆ ಇತರರಿಗೆ |
|---|---|---|---|---|---|---|---|---|---|---|---|
| ಆನೇಕಲ್ | 5 | 16 | 4044 | 75 | 3969 | 251 | 7 | 244 | 3793 | 68 | 3725 |
| ಕೃಷ್ಣರಾಜಪುರಂ | 2 | 4 | 524 | 0 | 524 | 246 | 0 | 246 | 278 | 0 | 278 |
| ದಾಸರಹಳ್ಳಿ | 1 | 1 | 797 | 17 | 780 | 408 | 9 | 399 | 389 | 8 | 381 |
| ಬೆಂಗಳೂರು ದಕ್ಷಿಣ | 1 | 8 | 483 | 0 | 483 | 224 | 0 | 224 | 259 | 0 | 259 |
| ಬ್ಯಾಟರಾಯನಪುರ | 1 | 1 | 140 | 0 | 140 | 103 | 0 | 103 | 37 | 0 | 37 |
| ಮಹದೇವಪುರ | 1 | 9 | 4199 | 83 | 4116 | 102 | 5 | 97 | 4097 | 78 | 4019 |
| ಯಲಹಂಕ | 7 | 41 | 5268 | 69 | 5199 | 988 | 16 | 972 | 4280 | 53 | 4227 |
| ಯಶವಂತಪುರ | 8 | 26 | 11753 | 183 | 11570 | 700 | 19 | 681 | 11053 | 164 | 10889 |
| ಒಟ್ಟು | 26 | 106 | 27208 | 427 | 26781 | 3022 | 56 | 2966 | 24186 | 371 | 23815 |

14/02/22